ಅಧ್ಯಕ್ಷರು.—ಸಧ್ಯ ಅರಳು ಮರಂಳು ಆಗದೇ ಇದ್ದರೆ ಸಾಕು. ಈಗ ಮಾನ್ಯ ಕೆ.ಎಸ್. ಈಶ್ವರಪ್ಪನವರು ತಮ್ಮ ಪ್ರಶ್ನೆಯನ್ನು ಕೇಳಬೇಕು.

## ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

### ಶಿವಮೊಗ್ಗದಲ್ಲಿ ಕೃಷಿ ವಿಶ್ವವಿದ್ಯಾಲಯ

೪೪೨. ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಶಿವಮೊಗ್ಗ ಜಿಲ್ಲೆಯಲ್ಲಿ ಕೃಷಿ ಮಹಾ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವ ಯೋಜನೆ ಯಾವ ಹಂತದಲ್ಲಿದೆ ?

ಶ್ರೀ ಕೆ. ಎಚ್. ರಂಗನಾಥ್ (ಕೃಷಿ ಮಂತ್ರಿ ತೋಟಗಾರಿಕೆ ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು).—

ಶಿವಮೊಗ್ಗದಲ್ಲಿ ಕೃಷಿ ಕಾಲೇಜನ್ನು ತೆರೆಯುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ.—ಸ್ವಾತಂತ್ರ್ಯ ಬಂದಾಗಿನಿಂದ ಇವತ್ತಿನತನಕ ನಮ್ಮ ಶಿವಮೊಗ್ಗ ಜಿಲ್ಲೆಯಿಂದ ಬಂದಂತಹ ಹಲವರು ಮಂತ್ರಿಗಳಿದ್ದಾರೆ, ಹಿಂದೆಯೂ ಪ್ರಭಾವಿಮಂತ್ರಿಗಳಾಗಿದ್ದರು. ಶ್ರೀ ಬದರೀನಾರಾಯಣ್ ಅಯ್ಯಂಗಾರ್, ಶ್ರೀ ಜೆ. ಹೆಚ್. ಪಟೇಲ್, ಶ್ರೀ ಕೆ. ಹೆಚ್. ಶ್ರೀನಿವಾಸ್ ಮುಂತಾದವರು ಮಂತ್ರಿಗಳಾಗಿದ್ದವರು. ಆದರೂ ಕೂಡ ಶಿವಮೊಗ್ಗ ಜಿಲ್ಲೆಯಲ್ಲಿ ಕೃಷಿ ಕಾಲೇಜನ್ನು ತೆರೆಯಲು ಸಾಧ್ಯವಾಗಿಲ್ಲ. ನಮ್ಮ ಜಿಲ್ಲೆಗೆ ಮಲತಾಯಿ ಧೋರಣೆಯನ್ನು ತೋರುತ್ತಿದ್ದಾರೆ, ಇದು ಸರಿಯಲ್ಲ ನಮ್ಮ ಜಿಲ್ಲೆಯಿಂದ ಬಂದಂತಹ ಶ್ರೀ ಕಾಗೋಡು ತಿಮ್ಮಪ್ಪನವರೂ ಕೂಡ ಮಂತ್ರಿಗಳಾಗಿದ್ದರು. ಮಾನ್ಯ ಶಿಕ್ಷಣ ಸಚಿವರು ಈ ಬಗ್ಗೆ ಗಮನ ಕೊಟ್ಟು ಈ ಬಾರಿಯಾದರೂ ಕೂಡ ಶಿವಮೊಗ್ಗದಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದು ಕೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ವರದನ್ ಸಮಿತಿಯ ವರದಿ ಸರಕಾರದ ಮುಂದಿದೆ, ಬಹಳ ಜಾಗ್ರತೆಯಾಗಿ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ, ತೀರ್ಮಾನ ತೆಗೆದುಕೊಂಡಾಗ ತಮ್ಮ ಜಿಲ್ಲೆಗೂ ಕೂಡ ಕಾಲೇಜು ದೊರಕುತ್ತದೆ. ಮಲತಾಯಿ ಧೋರಣೆಯನ್ನು ಮಾಡುವುದಿಲ್ಲ. ಹಿಂದೆ ಮಾನ್ಯ ಹೆಚ್. ಎಸ್. ರುದ್ರಪ್ಪನವರು ಕೂಡ ಕೃಷಿ ಮಂತ್ರಿಗಳಾಗಿದ್ದರು.

ಶ್ರೀ ಕೆ. ಎಸ್. ಈಶ್ವರಪ್ಪ.—ಆ ಜಿಲ್ಲೆಯ ಹಲವಾರು ಪ್ರಮುಖರು ಕ್ಯಾಬಿನೆಟ್‌ನಲ್ಲಿ ತುಂಬ ಪವರ್‌ಫುಲ್ ಮಂತ್ರಿಗಳಾಗಿದ್ದರು, ಇವರನ್ನು ಬಿಟ್ಟರೆ ನಡೆಯುವುದೇ ಇಲ್ಲ ಎನ್ನುವ ಸ್ಥಿತಿ ಇತ್ತು. ಅಂತಹ ಮಂತ್ರಿಗಳಿದ್ದರು. ಆದರೂ ಕೂಡ ಆಗಲಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಬಹಳ ಮಟ್ಟಿಗೆ ಆ ತೀರ್ಮಾನ ತೆಗೆದುಕೊಂಡಾಗ ಶಿವಮೊಗ್ಗ ಜಿಲ್ಲೆಗೆ ನ್ಯಾಯ ದೊರಕುತ್ತದೆ.

## ಶ್ರೀಗಂಧ ಕಳ್ಳಸಾಗಾಣಿಕೆ ಹಾಗೂ ಆನೆಗಳನ್ನು ಕೊಂದು ಹಾಕುವುದು

೪೪೩. ಶ್ರೀ ಆರ್. ಎನ್. ನಾಯಕ (ಭಟ್ಕಳ್).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿವಿಧ ಡಿ.ಎಫ್.ಓ ರವರ ಆಫೀಸುಗಳಲ್ಲಿ ಬಾಕಿ ಉಳಿದಿರುವ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು? ಹಾಗೂ ದಸ್ತಗಿರಿ ಮಾಡಲಾದ ವಾಹನಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ಶ್ರೀಗಂಧದ ಕಳ್ಳ ಸಾಗಾಣಿಕೆ ಹಾಗೂ ಆನೆಗಳನ್ನು ಕೊಂದ ಪ್ರಕರಣಗಳಲ್ಲಿ ಬಳಸಿದ ವಾಹನಗಳೆಷ್ಟು? (ಪ್ರತ್ಯೇಕ ವಿವರ ನೀಡುವುದು).

ಇ) ಹೊನ್ನಾವರ ಡಿ ಎಫ್. ಓ. ಆಫೀಸಿನಲ್ಲಿ ಈತನಕ ವಿಚಾರಣೆ ಆಗದೆ ಬಾಕಿ ಇರುವ ಅಪರಾಧದ ಪ್ರಕರಣಗಳೆಷ್ಟು? ಮತ್ತು ಎಂದಿನಿಂದ ವಿಚಾರಣೆ ಆಗದೆ ಬಾಕಿ ಇದೆ?